9

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ - ಸದನ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 20/1/2021

# ಶೀಘ್ರವೇ ಮಧ್ಯಂತರ ವರದಿ ಸಲ್ಲಿಕೆ

ಬೆಂಗಳೂರು: ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ವಿಷಯಕ್ಕೆ ಸಂಬಂಧಿಸಿಂದತೆ ಡಿಸೆಂಬರ್ 15 ರಂದು ವಿಧಾನಪರಿಷತ್‌ನಲ್ಲಿ ನಡೆದ ಗುದ್ದಾಟ ಕೋಲಾಹಲದ ಕುರಿತು ತನಿಖೆ ನಡೆಸಲು ರಚನೆಯಾಗಿರುವ ಸದನ ಸಮಿತಿ ಅತಿ ಶೀಘ್ರದಲ್ಲೇ ಮಧ್ಯಂತರ ವರದಿ ಸಲ್ಲಿಸಲು ಸಿದ್ಧತೆ ನಡೆಸಿದೆ.

ಈಗಾಗಲೇ ಸಮಿತಿ ಎರಡು ಸುತ್ತಿನ ಸಭೆ ನಡೆಸಿದೆ. ಗುರುವಾರ(21) ಮಧ್ಯಂತರ ವರದಿಯ ಕರಡು ಪರಿಶೀಲನಾ ಸಭೆ ನಡೆಯಲಿದೆ. ಡಿಸೆಂಬರ್ 15 ರಂದು ವಿಧಾನಪರಿಷತ್‌ನಲ್ಲಿ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯ ವಿಚಾರವಾಗಿ ಗದ್ದಲ ಉಂಟಾಗಿತ್ತು. ಈ ಸಂದರ್ಭದಲ್ಲಿ ಸದನದ ಸಂಪ್ರದಾಯ ಮೀರಿ ಜೆಲ್ ಮುಕ್ತಾಯಗೊಳ್ಳುವ ಮೊದಲು ಉಪಸಭಾಪತಿಯಾಗಿದ್ದ ಧರ್ಮೇಗೌಡ ಅವರು ಸಭಾಪತಿ ಪೀಠದಲ್ಲಿ ಕುಳಿತಿದ್ದರು ಎಂಬ ಆರೋಪಿಸಲಾಗಿತ್ತು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು ಉಪಸಭಾಪತಿಯನ್ನು ಬಲವಂತದಿಂದ ಸಭಾಪತಿ ಪೀಠದಿಂದ ಎಬ್ಬಿಸಿ ಕೆಳಕ್ಕೆ ಎಳೆದು ಹಾಕಿದ್ದರು. ಈ ಸಂದರ್ಭದಲ್ಲಿ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರ ನಡುವೆ ಜಟಾಪಟ ನಡೆದಿತ್ತು. ಸಭಾಪತಿಯ ಪೀಠಕ್ಕೂ ಹಾನಿ ಉಂಟು ಮಾಡಲಾಗಿತ್ತು.

## ಮೇಲ್ಮನೆ ಗುದ್ದಾಟ

ಪರಿಷತ್ ಗಲಭೆಗೆ ವ್ಯಾಪಕ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಸಭಾಪತಿ ಪ್ರತಾಪ ಚಂದ್ರ ಶೆಟ್ಟಿ ಅವರು ಘಟನೆಯ ತನಿಖೆ ನಡೆಸುವ ನಿಟ್ಟಿನಲ್ಲಿ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಅಧ್ಯಕ್ಷತೆಯಲ್ಲಿ ಸದನ ಸಮಿತಿ ರಚನೆ ಮಾಡಿದ್ದರು. ಈ ಸಮಿತಿಯಲ್ಲಿ ಬಿ.ಕೆ ಹರಿಪ್ರಸಾದ್, ಹೆಚ್ ವಿಶ್ವನಾಥ್, ಆರ್.ಬಿ ತಿಮ್ಮಾಪೂರ, ಎಸ್‌ವಿ ಸಂಕನೂರ ಸದಸ್ಯರಿದ್ದರು. ಆದರೆ ಈ ಪೈಕಿ ಬಿಜೆಪಿ ಸದಸ್ಯರಾದ ಹೆಚ್.ವಿಶ್ವನಾಥ್ ಹಾಗೂ ಎಸ್‌ವಿ ಸಂಕನೂರ ಮೊದಲ ಸಭೆ ಸೇರುತ್ತಲೇ ರಾಜೀನಾಮೆ ನೀಡಿ ಸಭೆ ಬಹಿಷ್ಕರಿಸಿದ್ದರು. ಇದೀಗ ಇವರ ಅನುಪಸ್ಥಿತಿಯಲ್ಲಿ ಸಮಿತಿಯ ಮಧ್ಯಂತರ ವರದಿಯ ಕರಡು ಪರಿಶೀಲನೆ ಸಭೆ ಗುರುವಾರ ಶಾಸಕರ ಭವನದಲ್ಲಿ ನಡೆಯಲಿದೆ. ಆ ಬಳಿಕ ಸಮಿತಿ ಮಧ್ಯಂತರ ವರದಿಯನ್ನು ಸಭಾಪತಿಗೆ ಸಲ್ಲಿಸಲು ತಯಾರಿ ನಡೆಸಿದೆ.